ಶ್ರೀ ವೀರೇಂದ್ರ ಪಾಟೀಲ್.—ಬೈರಂಪಾದದ ಬಳಿ ಅಣೆಕಟ್ಟು ಕಟ್ಟಬೇಕೆಂದು ಫೀಲ್ಡ್‌ನರ್ವೆ ಮಾಡಿತ್ತು. ಆದರೆ ಮೊನ್ನೆ ಇದಕ್ಕೆ 7 ಮೈಲಿಗಳ ಮೇಲ್ಭಡೆ ಚಿಕ್ಕಗೋಣಿಕರೆ ಎಂಬುದಿದೆ, ಅಲ್ಲಿ ಈ ಅಣೆಕಟ್ಟನ್ನು ಕಟ್ಟಲು ಉತ್ತಮವಾದ ಸ್ಥಳವಾಗಿದೆಯೆಂದು ಯೋಚಿಸಿದ ಮೇಲೆ ಅದನ್ನು ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ. ಅದರಲ್ಲಿ ಯಾವುದು ಒಳ್ಳೆಯದಿದೆಯೋ ಅದನ್ನು ವಿಚಾರ ಮಾಡುತ್ತೇವೆ.

Gorur Anecut

*Q.—24. Sri N. A. CHANNE GOWDA (Pandavapura).—

Will the Minister for Public Works be pleased to state :—

(*a*) whether the work of the Gorur Anecut has been started ;

(*b*) the estimated cost of the same ;

(*c*) the extent of wet land that would be irrigated by this project in Mandya District (Talukwise and Hobliwise figures may be furnished) ?

A.—Sri VEERENDRA PATIL (Minister for Public Works).—

(*a*) Yes.

(*b*) Rs. 16.3 crores.

(*c*) 1. Krishnarajapet ... 38,500 acres.
2. Pandavapura ... 10,000 acres.

Hobliwise figures are not readily available.

ಈ ಪ್ರಶ್ನೆಯಲ್ಲಿ ಮಾನ್ಯ ಸದಸ್ಯರು ಈ ಗೊರೂರು ಯೋಜನೆಯಿಂದ ನೀರಾವರಿಯಾಗುವ ತರಿ ಜಮೀನಿನ ವಿಸ್ತೀರ್ಣವನ್ನು ತಾಲ್ಲೂಕುವಾರು ಮತ್ತು ಹೋಬಳಿವಾರು ಕೇಳಿದ್ದರು. ತಾಲ್ಲೂಕು ವಾರು ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ 35,000 ಎಕರೆ ನೀರಾವರಿಯಾಗುತ್ತದೆ, ಪಾಂಡವಪುರ ತಾಲ್ಲೂಕಿನಲ್ಲಿ 13,537 ಎಕರೆ ನೀರಾವರಿಯಾಗುತ್ತದೆ. ಹೋಬಳಿವಾರು ವಿಸ್ತೀರ್ಣವೂ ಇತ್ತೀಚೆಗೆ ಬಂದಿದೆ. ಅದು ಈ ರೀತಿ ಇದೆ; ಕಿಕ್ಕೇರಿ 14,500 ಎಕರೆ ನೀರಾವರಿಯಾಗುತ್ತದೆ. ಕಸಬಾ 7,000 ಎಕರೆ, ನಂತೇಡಾಚಹಳ್ಳಿ 300 ಎಕರೆ, ಬೂಕನಕೆರೆ 11,200, ಸೀಲನಕೆರೆ 2,000 ಎಕರೆ ನೀರಾವರಿಯಾಗುತ್ತದೆ. ಆಮೇಲೆ ಪಾಂಡವಪುರ ತಾಲ್ಲೂಕಿನಲ್ಲಿ ಚಿನಕುರಳಿ 8,000 ಎಕರೆ ನೀರಾವರಿ ಯಾಗುತ್ತದೆ. ಮೆಳಿಕೋಟೆ 537 ಎಕರೆ, ಕಸಬ 5,000 ಎಕರೆ ನೀರಾವರಿಯಾಗುತ್ತದೆ. ಈ ವಿಷಯವನ್ನು ಸೂಪರಿಂಟೆಂಡಿಂಗ್ ಇಂಜಿನಿಯರು ಮತ್ತೆ ಪರೀಕ್ಷೆ ಮಾಡಿ ತಿಳಿಸಿದ್ದಾರೆ.

ಶ್ರೀ ಎನ್. ಎ. ಚನ್ನೇಗೌಡ.—ಈ ಯೋಜನೆಯ ಬಲನಾಲೆಯನ್ನು ತಗೆದುಕೊಳ್ಳುವ ಉದ್ದೇಶ ಇದೆಯೇ ? ಇದಕ್ಕೆ ಸುರಂಗ ಮಾರ್ಗವನ್ನು ತೆಗೆಯಲು ವೆಚ್ಚ ಎಷ್ಟಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಈ ಯೋಜನೆಯಲ್ಲಿ ಎರಡು ನಾಲೆಗಳು ಬರುತ್ತವೆ. ಎಡ ನಾಲೆ 159 ಮೈಲಿ ಬರುತ್ತದೆ. ಬಲ ನಾಲೆ 59 ಮೈಲಿ ಬರುತ್ತದೆ. ಎಡ ನಾಲೆಯಲ್ಲಿ 85 ಸಾವಿರ ಎಕರೆ ನೀರಾವರಿಯಾಗುತ್ತದೆ. ಮತ್ತು ಬಲ ನಾಲೆಯಲ್ಲಿ 15 ಸಾವಿರ ಎಕರೆ ನೀರಾವರಿಯಾಗುತ್ತದೆ.

ಶ್ರೀ ಎನ್. ಎ. ಚನ್ನೇಗೌಡ.—ಈ ಯೋಜನೆಯ ಬಲ ನಾಲೆಗೆ ಸುರಂಗ ಮಾರ್ಗವನ್ನು ತೆಗೆಯಲು ಎಷ್ಟು ವೆಚ್ಚವಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಆ ತಪಶೀಲು ನನ್ನ ಹತ್ತಿರ ಇಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ ನಾಲೆಗಳ ಕಟ್ಟೆಯನ್ನು ಕಟ್ಟುವುದಕ್ಕೆ ಎಷ್ಟು ವರ್ಷ ಗಳಿಂದ ಆಲೋಚನೆ ಮಾಡುತ್ತಿದ್ದೀರಿ, ಇದನ್ನು ಶುರು ಮಾಡುವುದು ಯಾವಾಗ, ಎಷ್ಟು ವರ್ಷಗಳಲ್ಲಿ ಇದು ಮುಗಿಯುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಇದಕ್ಕೆ ಇನ್ನೂ ಪ್ಲಾನಿಂಗ್ ಕಮಿಷನ್ನಿನಿಂದ ಟೆಕ್ನಿಕಲ್ ಕ್ಲಿಯರೆನ್ಸ್ ಬಂದಿಲ್ಲ. ಇದಕ್ಕೆ ಈಗಾಗಲೇ ಎರಡೂವರೆ ಕೋಟಿ ರೂಪಾಯಿಗಳ ಟೆಂಡರ್ ಕರೆದು ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಈ ಕೆಲಸವನ್ನು ಆದಷ್ಟು ಜಾಗ್ರತೆ ಮಾಡಬೇಕೆಂಬ ವಿಚಾರ ಸರ್ಕಾರಕ್ಕೆ ಇದೆ.

ಶ್ರೀ ಎಂ. ಬಸವರಾಜು.—ಈ ಗೊರೂರು ಅಣೆಕಟ್ಟೆಯ ಬಲ ನಾಲೆಯಿಂದ ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಎಷ್ಟು ಎಕರೆ ನೀರಾವರಿಯಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಬಲನಾಲೆಯಿಂದ ಒಟ್ಟು 15 ಸಾವಿರ ಎಕರೆ ನೀರಾವರಿ ಆಗುತ್ತದೆ. ಆದರೆ ಬಲ ನಾಲೆ ಕೃಷ್ಣರಾಜನಗರಕ್ಕೆ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ನಮಗೆ ಎಷ್ಟೋ ಸಾರಿ ತಾವು ಹೇಳಿದ್ದೀರಿ, ಸರ್ಕಾರಕ್ಕೆ ದುಡ್ಡಿನ ಅಡಚಣೆ ಇವೆ, ದುಡ್ಡು ಬಂದಾಗ ಆ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು. ಆ ಪ್ರದೇಶದ ರೈತರು ಮುಂಗಡವಾಗಿ ಕಾಂಟ್ರಿಬ್ಯೂಷನ್ ಕೊಡುವುದಾದರೆ ತಾವು ವ್ಯವಸ್ಥೆ ಮಾಡಿ ಆ ಕೆಲಸವನ್ನು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿಯ ರೈತರು ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಅನ್ನು ಮುಂಗಡವಾಗಿ ಕೊಟ್ಟರೆ ಆ ಕೆಲಸವನ್ನು ಬಹಳ ತೀವ್ರವಾಗಿ ಮಾಡುತ್ತೇವೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ರೈತರು ಅದನ್ನು ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಏತಕ್ಕೆಂದರೆ, ಪ್ರತಿಯೊಂದು ಪ್ರದೇಶದಲ್ಲಿಯೂ ಮಳೆ ಬಾರದೆ ವ್ಯವಸಾಯ ಮಾಡತಕ್ಕ ರೈತರು ಕಂಗೆಟ್ಟಿದ್ದಾರೆ. ನೀರಾವರಿ ಮಾಡುವುದಕ್ಕೋಸ್ಕರ ರೈತರಿಂದ ದುಡ್ಡು ವಸೂಲು ಮಾಡಲು ಏನಾದರೂ ಒಂದು ವ್ಯವಸ್ಥೆಯನ್ನು ಮಾಡುವುದಾದರೆ ಸಾರ್ವಜನಿಕರ ಸಹಾಯವನ್ನು ಒದಗಿಸುವುದಕ್ಕೆ ನಾವು ತಯಾರಾಗಿದ್ದೇವೆ. ಹಾಗಾದರೆ ಇದನ್ನು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದ್ದೇನೆ ಅದು ಸ್ವಾಗತಾರ್ಹ ಎಂದು. ಅನೇಕ ಸಲ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ ಜನ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಮುಂದೆ ಬಂದರೆ ಬಹಳ ತ್ವರಿತವಾಗಿ ಕೆಲಸಗಳನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು.

ಶ್ರೀ ಎಚ್. ಎನ್. ನಂಜೇಗೌಡ.—ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು ಈ ಯೋಜನೆಗೆ ಇನ್ನೂ ಕೇಂದ್ರ ಸರ್ಕಾರದಿಂದ ಟೆಕ್ನಿಕಲ್ ಕ್ಲಿಯರೆನ್ಸ್ ಬಂದಿಲ್ಲ ಎಂದು. ಕೇಂದ್ರ ಸರ್ಕಾರದವರು ಈ ಯೋಜನೆಯು ಫೀಜಬಲ್ ಅಲ್ಲ ಎಂದು ಟೆಕ್ನಿಕಲ್ ಕ್ಲಿಯರೆನ್ಸ್ ಕೊಡದೇ ಹೋದರೆ ಈಗ ಆ ಕೆಲಸಗಳಿಗೆ ಖರ್ಚು ಮಾಡಿರುವ ಹಣದ ಪರಿಸ್ಥಿತಿ ಏನು ?

ಶ್ರೀ ವೀರೇಂದ್ರ ಪಾಟೀಲ್.—ಈ ಪ್ರಾಜೆಕ್ಟಿಗೆ ಪ್ರೊಸೀಜರ್ ಪ್ರಕಾರ ಕೇಂದ್ರ ಸರ್ಕಾರದಿಂದ ಟೆಕ್ನಿಕಲ್ ಕ್ಲಿಯರೆನ್ಸ್ ಬರಬೇಕು. ದುರ್ದೈವವಶಾತ್ ಇನ್ನೂ ಬಂದಿಲ್ಲ. ಆ ಬಗ್ಗೆ ನಾವು ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡುತ್ತಿದ್ದೇವೆ. ಮಾನ್ಯ ಮಂತ್ರಿಗಳು 5ನೇ ತಾರೀಖು ದೆಹಲಿಗೆ ಹೋಗುತ್ತಾರೆ. ಆಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದಿದ್ದಾರೆ. ನಮಗೆ ತಿಳಿದಮಟ್ಟಿಗೆ ಆ ಕಾಗದ ಪ್ಲಾನಿಂಗ್ ಕಮಿಷನ್ನಿನಿಂದ ಇರಿಗೇಷನ್ ಕಮಿಷನ್ನಿಗೆ ಓಡಾಡುತ್ತಿದೆ. ಸಂಬಂಧಪಟ್ಟ ಎಲ್ಲಾ ಮಂತ್ರಿಗಳನ್ನು ಕಂಡು ಚರ್ಚೆ ಮಾಡಿ ಅದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಒಂದು ವೇಳೆ ಇದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಬರುವುದಕ್ಕೆ ನಿಧಾನವಾದರೂ ಕೆಲಸ ನಿಲ್ಲಿಸುವುದಿಲ್ಲ. ಅದನ್ನು ಮುಂದುವರಿಸಿಕೊಂಡು ಹೋಗುತ್ತೇವೆ.

ಶ್ರೀ ಎಸ್. ಶಿವಪ್ಪ.—ಇತ್ತೀಚೆಗೆ ತಯಾರ್ಮಾಡಿದ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಟೆಕ್ನಿಕಲ್ ಸ್ಯಾಂಕ್ಷನ್ ತೆಗೆದುಕೊಂಡು ಎಸ್ಟಿಮೇಟು ಮಾಡಿದ್ದರೂ ಕೂಡ ಯೋಜನೆ ತೆಗೆದುಕೊಳ್ಳಲು ವಿಳಂಬ ಮಾಡುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ವಿಳಂಬ ಮಾಡಿಲ್ಲ. 1924 ರ ಅಗ್ರಿಮೆಂಟ್ ಪ್ರಕಾರ ಯೋಜನೆ ತಯಾರ್ಮಾಡಬೇಕಾಗುತ್ತದೆ. ನಮ್ಮ ಮತ್ತು ಮದ್ರಾಸ್ ಸರಕಾರದ ಅಧಿಕಾರಿಗಳು ಕೂಡಿ ವರ್ಕಿಂಗ್ ಟೇಬಲ್ ತಯಾರ್ಮಾಡಬೇಕಾಗುತ್ತದೆ. 1924ರ ಅಗ್ರಿಮೆಂಟ್ ಪ್ರಕಾರ ಇರುವ ಹಕ್ಕುಗಳಿಗೆ ಧಕ್ಕೆಯಾಗದಂತೆ ನೋಡಬೇಕಾಗಿದೆ ಅಗ್ರಿಮೆಂಟ್ ಪ್ರಕಾರ ನಾವು ತಯಾರಿದ್ದೇವೆ. ಯೋಜನೆ ಪ್ರಾರಂಭ ಮಾಡುವುದನ್ನು ತಡೆ ಹಿಡಿಯುವುದು ಯೋಗ್ಯವಲ್ಲ ಎಂದು ಕೇಂದ್ರಕ್ಕೆ ನಾವು ಪದೇ-ಪದೇ ಹೇಳುತ್ತಿದ್ದೇವೆ.

ಶ್ರೀ ಕೆ. ಸಿಂಗಾರಿ ಗೌಡ.—ಮಂಡ್ಯ ಜಿಲ್ಲೆಯಲ್ಲಿ ಪರಿಶೀಲನೆ ನಡೆಸಿದ್ದು ಸರಕಾರಕ್ಕೆ ಬಂದಿಪೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಇನ್ನೂ ಬಂದಹಾಗೆ ಇಲ್ಲ. ಅಲ್ಲಿ ನೀರು ಸಾಕಷ್ಟು ಇದೆಯೇ ಇಲ್ಲವೇ ಎಂಬ ಪ್ರಶ್ನೆ ಇದೆ. ಲಿಮಿಟೆಡ್ ಪ್ರೊಪೋಗಾಗಿ ನೀರು ಇರುತ್ತದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಬಸವರಾಜು.—ಗೋರೂರು ಅಣೆಕಟ್ಟಿನ ಬಲ ದಂಡೆ ಕಾಲುವೆಯು ಕೃಷ್ಣರಾಜ ನಗರದವರೆಗೆ ಬರುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮ್ಯಾಪ್ ನೋಡಿದರೆ ಆ ಏರಿಯಾ ಈ ಯೋಜನೆಯಲ್ಲಿ ಇಲ್ಲ. ಬಲ ದಂಡೆ ಸಣ್ಣ ನಾಲೆ ಇರುವುದರಿಂದ ಅಲ್ಲಿಯವರಿಗೆ ನೀರು ಬರುವ ಹಾಗೆ ಕಾಣುವುದಿಲ್ಲ.

Mr. SPEAKER.—The correct information, if not available now, may be sent to the hon'ble Member later.

———

Anecut across Shimsha River

*Q.—145. Sri G. MAGDE GOWDA (Kirugavalu).—

Will the Minister for Public Works be pleased to state :—

(*a*) whether it is a fact that a Plan and an estimate has been prepared for constructing an anecut across Shimsha River near Igglur;

(*b*) if so, the estimated cost and the total area to be irrigated ;

(*c*) when the Scheme would be executed ?

A.—Sri VEERENDRA PATIL (Minister for Public Works).—

(*a*) Yes.

(*b*) Rs. 26 lakhs and about 1,400 acres.

(*c*) The scheme was dropped in view of the large extent of submersion.

ಶ್ರೀ ಜಿ. ಮಾದೇಗೌಡ.—1964-65 ರಲ್ಲಿ ಬಜೆಟ್ ಅಧಿವೇಶನದಲ್ಲಿ ಇದೇ ಒಂದು ಪ್ರಶ್ನೆ ಹಾಕಿದ್ದೆ. ಆ ಸಂದರ್ಭದಲ್ಲಿ ಈ ಶಿಂಶಾ ಅಣೆಕಟ್ಟಿನಿಂದ ಹತ್ತು ಸಾವಿರ ಎಕರೆ ನೀರಾವರಿಯಾಗುತ್ತದೆ ಅದಕ್ಕೆ ನಲವತ್ತು ಸಾವಿರ ಖರ್ಚಾಗುತ್ತದೆ ಸಧ್ಯದಲ್ಲೇ ಈ ಯೋಜನೆ ತೆಗೆದುಕೊಳ್ಳುತ್ತೇವೆ ಎಂದು ಆಗ್ಗೆ ಉಪ್ಪಣೆ ಕೊಡಿಸಿದ್ದಿರಿ. ಆದರೆ ಈಗ ಈ ಯೋಜನೆಯನ್ನು ಕೈ ಬಿಟ್ಟಿದ್ದೀರಿ. ಇದರ ಸಮಾಚಾರ ಏನು ?

ಶ್ರೀ ವೀರೇಂದ್ರ ಪಾಟೀಲ್.—ಹತ್ತು ಸಾವಿರ ಎಕರೆ ನೀರಾವರಿಯಾಗುತ್ತದೆ, ನಲವತ್ತು ಸಾವಿರ ಖರ್ಚಾಗುತ್ತದೆ ಎಂದು ಆ ರೀತಿ ಹೇಳಿರಲಿಕ್ಕಿಲ್ಲ. ಈ ಯೋಜನೆ ಫೀಜಿಬಲ್ ಇಲ್ಲ ಎಂದು ಕಂಡು ಬಂದಿದೆ. ಈ ಯೋಜನೆಯಿಂದ ಒಟ್ಟು 1,400 ಎಕರೆ ನೀರಾವರಿ ಅನುಕೂಲವಾಗುತ್ತದೆ ಹಾಗೂ ಡೆವಲಪ್ ಆಗಿರುವ 800 ಎಕರೆ ಮುಳುಗಡೆಯಾಗುತ್ತದೆ. ಇದು ಫೀಜಿಬಲ್ ಇಲ್ಲ ಎಂದು ಕೈ ಬಿಟ್ಟಿದ್ದೇವೆ. ಶಿಂಶಾ ಯೋಜನೆಯನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದೇವೆ ಎಂದು ಹೇಳಿಲ್ಲ. ಸೀಪೇಜ್ ವಾಟರ್ ಉಪಯೋಗಿಸಿಕೊಳ್ಳುವ ಆಲ್ಟರ್‌ನೇಟೀವ್ ಯೋಜನೆಮಾಡಿದೆ. ಇನ್ನೊಂದು ಯೋಜನೆ ಮಾಡಿದೆ. ಇದರಿಂದ 3,800 ಎಕರೆ ನೀರಾವರಿ ಅನುಕೂಲವಾಗುತ್ತದೆ. ಪುದ್ದೂರು, ಮುಳವಳ್ಳಿ, ಚನ್ನಪಟ್ಟಣ ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಇದಕ್ಕೆ 55 ಲಕ್ಷ ರೂಪಾಯಿ ಖರ್ಚಾಗುತ್ತದೆ. ಇದನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ತೆಗೆದುಕೊಳ್ಳುತ್ತೇವೆ.